ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ
(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)
ಕಂಪನಿ ಕಛೇರಿ,
ನವನಗರ, ಪಿ.ಬಿ.ರೋಡ, ಹುಬ್ಬಳ್ಳಿ - 580 025.
Tel: +91836 2324196

HUBLI ELECTRICITY SUPPLY COMPANY LIMITED
(Wholly owned Govt. of Karnataka undertaking)
Company Office,
Navanagar, P.B.Road, Hubballi - 580025
E-mail Id: eehrd.hescom@gmail.com

Corporate Identity Number (CIN): U31401KA2002SGC030437

ಕ್ರ.ಸಂ:ಹೆಸ್ಕಾಂ/ಪ್ರ.ವ್ಯ(ಆ&ಮಾ.ಸಂ.ಅ)/ಇಇ(ಮಾ.ಸಂ.ಅ&ಕೈ.ತ.ಕೇಂ)/21-22/ CYS-5329 ದಿ: 24 JAN 2022

# ಅಧಿಕೃತ ಜ್ಞಾಪನಾಪತ್ರ

ವಿಷಯ: ಅನುಗಮನ/ಉದ್ಯೋಗ ಪೂರ್ವ ತರಬೇತಿಯ ಅಂತಿಮ ಪರೀಕ್ಷೆಯಲ್ಲಿ ಅನುತ್ತೀರ್ಣಗೊಂಡ ಅಭ್ಯರ್ಥಿಗಳ ಉತ್ತರ ಪತ್ರಿಕೆಗಳ ನಕಲನ್ನು ನೀಡುವ ಹಾಗೂ ಮರು ಮೌಲ್ಯಮಾಪನ ಮಾಡುವ ಬಗ್ಗೆ.

ಉಲ್ಲೇಖ: 1) ನಿಗಮದ ಆದೇಶ ಸಂಖ್ಯೆ:ಕವಿಪ್ರನಿನಿ/ಮಾಸಂಅಕೇಂ/ಬಿ76/2851/2019-20/Cys-123 ದಿನಾಂಕ: 14.11.2019.

2) ಪಿ.ಎಲ್.ಓ ಕಡತ ಸಂಖ್ಯೆ:1823/20-21 ರ ಅನುಮೋದಿತ ಪ್ಯಾರಾ ಸಂಖ್ಯೆ: 34 ದಿ: 18.01.2021

********

ಹೆಸ್ಕಾಂಮಿನ ಕೈಗಾರಿಕಾ ತರಬೇತಿ ಕೇಂದ್ರದಲ್ಲಿ ಹೊಸದಾಗಿ ನೇರ ನೇಮಕಾತಿ/ಅನುಕಂಪದ ಆಧಾರದ ಮೇಲೆ/ ಬಡ್ತಿ ಹೊಂದಿದ ಅಭ್ಯರ್ಥಿಗಳಿಗೆ/ ಉದ್ಯೋಗ ಪೂರ್ವ ತರಬೇತಿಯನ್ನು ನೀಡಲಾಗುತ್ತದೆ. ತರಬೇತಿ ನಂತರ ಅಂತಿಮ ಪರೀಕ್ಷೆಯನ್ನು ನಡೆಸಿ ಫಲಿತಾಂಶವನ್ನು ಘೋಷಿಸಲಾಗುತ್ತದೆ.ಅಂತಿಮ ಪರೀಕ್ಷೆಯಲ್ಲಿ ಅನುತ್ತೀರ್ಣರಾದ ಅಭ್ಯರ್ಥಿಗಳು ಉತ್ತರ ಪತ್ರಿಕೆಗಳ ನಕಲು ಪ್ರತಿಯನ್ನು ಪಡೆಯಲು ಹಾಗೂ ಅವರ ಉತ್ತರ ಪತ್ರಿಕೆಗಳ ಮರು ಮೌಲ್ಯಮಾಪನ ಮಾಡಿ ಪೂರಕ ಫಲಿತಾಂಶವನ್ನು ಘೋಷಿಸಲು ಈ ಮೂಲಕ ಅನುಮೋದನೆ ನೀಡಲಾಗಿದೆ. ಸದರಿ ಪ್ರಕ್ರಿಯೆಯು 2021 ನೇ ಅಗಸ್ಟ ತಿಂಗಳು ಮತ್ತು ನಂತರದ ದಿನಗಳಲ್ಲಿ ನಡೆಯುವ ಪರೀಕ್ಷೆಗಳಿಗೆ ಅನ್ವಯಿಸುತ್ತದೆ.

ಉತ್ತರ ಪತ್ರಿಕೆಗಳ ನಕಲು ಪ್ರತಿ ಪಡೆಯಲು ಹಾಗೂ ಮರು ಮೌಲ್ಯಮಾಪನಕ್ಕಾಗಿ ಪಾವತಿಸಬೇಕಾದ ಶುಲ್ಕಗಳನ್ನು ಈ ಕೆಳಕಂಡಂತೆ ನಿಗದಿಪಡಿಸಲಾಗಿದೆ.

| ಕ್ರ. ಸಂ | ಹುದ್ದೆ | ಉತ್ತರ ಪತ್ರಿಕೆಗಳ ನಕಲು ಪ್ರತಿ ಪಡೆಯಲು ಪಾವತಿಸಬೇಕಾದ ಶುಲ್ಕ | ಉತ್ತರ ಪತ್ರಿಕೆಗಳ ಮರು ಮೌಲ್ಯ ಮಾಪನಕ್ಕಾಗಿ ಪಾವತಿಸಬೇಕಾದ ಶುಲ್ಕ | ಉತ್ತರ ಪತ್ರಿಕೆಗಳ ನಕಲು ಪ್ರತಿ/ ಮರು ಮೌಲ್ಯಮಾಪನಕ್ಕಾಗಿ ಪ್ರ.ವ್ಯ(ಆ&ಮಾ.ಸಂ.ಅ), ನವನಗರ, ಹುಬ್ಬಳ್ಳಿ ಇವರಿಗೆ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ |
|---|---|---|---|---|
| 1 | ಕಿರಿಯ ಇಂಜಿನಿಯರ್(ವಿ), ಸಹಾಯಕ, ಕಿರಿಯ ಸಹಾಯಕ | ಪ್ರತಿ ಉತ್ತರ ಪತ್ರಿಕೆಗೆ ರೂ.75/- + ರೂ.14/- (ಜಿ.ಎಸ್.ಟಿ.18%) ಒಟ್ಟು ರೂ. 89/- ರಂತೆ ಪಾವತಿಸತಕ್ಕದ್ದು | -- | ಅಂತಿಮ ಪರೀಕ್ಷೆಯ ಫಲಿತಾಂಶ ಘೋಷಣೆಯಾದ 10 ದಿನಗಳ ಒಳಗೆ ನಕಲು ಪ್ರತಿ ಪಡೆಯಲು ಅರ್ಜಿಯನ್ನು ಸಲ್ಲಿಸತಕ್ಕದ್ದು |

| ಕ್ರ. ಸಂ | ಹುದ್ದೆ | ಉತ್ತರ ಪತ್ರಿಕೆಗಳ ನಕಲು ಪ್ರತಿ ಪಡೆಯಲು ಪಾವತಿಸಬೇಕಾದ ಶುಲ್ಕ | ಉತ್ತರ ಪತ್ರಿಕೆಗಳ ಮರು ಮೌಲ್ಯ ಮಾಪನಕ್ಕಾಗಿ ಪಾವತಿಸಬೇಕಾದ ಶುಲ್ಕ | ಉತ್ತರ ಪತ್ರಿಕೆಗಳ ನಕಲು ಪ್ರತಿ/ ಮರು ಮೌಲ್ಯಮಾಪನಕ್ಕಾಗಿ ಪ್ರ.ವ್ಯ (ಆ ಮ ಮಾ.ಸಂ.ಅ) ನವನಗರ, ಹುಬ್ಬಳ್ಳಿ ಇವರಿಗೆ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ |
|---|---|---|---|---|
| 2 | ಕಿರಿಯ ಇಂಜಿನಿಯರ್ (ವಿ), ಸಹಾಯಕ, ಕಿರಿಯ ಸಹಾಯಕ, | -- | ಪ್ರತಿ ಉತ್ತರ ಪತ್ರಿಕೆಗೆ ರೂ.750/- + ರೂ.135/- (ಜಿ.ಎಸ್.ಟಿ.18%) ಒಟ್ಟು ರೂ. 885/- ರಂತೆ ಪಾವತಿಸತಕ್ಕದ್ದು | ಅಂತಿಮ ಪರೀಕ್ಷೆಯ ಫಲಿತಾಂಶ ಘೋಷಣೆಯಾದ 15 ದಿನಗಳ ಒಳಗೆ ಮರು ಮೌಲ್ಯಮಾಪನಕ್ಕಾಗಿ ಅರ್ಜಿಯನ್ನು ಸಲ್ಲಿಸತಕ್ಕದ್ದು |

ಉತ್ತರ ಪತ್ರಿಕೆಗಳ ನಕಲು ಪ್ರತಿ ಪಡೆಯಲು/ಮರುಮೌಲ್ಯ ಮಾಪನ ಮಾಡಿಸಲು ಇಚ್ಚಿಸುವ ಅಭ್ಯರ್ಥಿಗಳು ಶುಲ್ಕವನ್ನು State Bank of India (SBI) ಬ್ಯಾಂಕ್ ನಲ್ಲಿ DD ಯನ್ನು Financial Adviser, HESCOM, Corporate office, Navanagar, Hubballi payable at Hubballi ಇವರ ಹೆಸರಿಗೆ ಖರೀದಿಸಿ ಅಥವಾ ನಗದಾಗಿ, ಅಭ್ಯರ್ಥಿಗಳು ಕಾರ್ಯನಿರ್ವಹಿಸುತ್ತಿರುವ ಕಚೇರಿಯ ಲೆಕ್ಕ ಶಾಖೆಯಲ್ಲಿ ಪಾವತಿಸತಕ್ಕದ್ದು. ಪಾವತಿಸಿದ ಶುಲ್ಕದ ವಿವರಗಳನ್ನು ಅನುಬಂಧದಲ್ಲಿ ಲಗತ್ತಿಸಿರುವ ನಮೂನೆಯಲ್ಲಿ ಭರ್ತಿ ಮಾಡಿ ಅರ್ಜಿಯನ್ನು ಸಲ್ಲಿಸುವುದು.

**ಸೂಚನೆ: ಅಗಸ್ಟ 2021 ರಿಂದ ಇದುವರೆಗೆ ನಡೆದಿರುವ ಪರೀಕ್ಷೆಗಳಲ್ಲಿ ಅನುತ್ತೀರ್ಣರಾದ ಅಭ್ಯರ್ಥಿಗಳಿಗೆ ಉತ್ತರ ಪತ್ರಿಗಳ ನಕಲು ಪ್ರತಿ ಪಡೆಯಲು ಹಾಗೂ ಉತ್ತರ ಪತ್ರಿಕೆಗಳ ಮರು ಮೌಲ್ಯಮಾಪನಕ್ಕಾಗಿ ಅರ್ಜಿ ಸಲ್ಲಿಸಲು ಈ ಅಧಿಕೃತ ಜ್ಞಾಪನಾ ಪತ್ರವನ್ನು ಜಾರಿಗೊಳಿಸಿದ ದಿನಾಂಕದಿಂದ 15 ದಿನಗಳವರೆಗೆ ಕಾಲಾವಕಾಶ ನೀಡಲಾಗಿದೆ.**

ಪ್ರಧಾನ ವ್ಯವಸ್ಥಾಪಕರು,
ಆ. ಮತ್ತು ಮಾ.ಸಂ.ಅ.,

ಪ್ರತಿಗಳು:

1. ಅಧೀಕ್ಷಕ ಇಂಜಿನಿಯರರು(ವಿ), ಕಾರ್ಯ ಮತ್ತು ಪಾಲನಾ ವೃತ್ತ ಹು.ವಿ.ಸ.ಕಂ.ನಿ., ಹುಬ್ಬಳ್ಳಿ/ ಹಾವೇರಿ/ಶಿರಸಿ/ ಬೆಳಗಾವಿ/ಚಿಕ್ಕೋಡಿ/ವಿಜಯಪೂರ/ಬಾಗಲಕೋಟ ಇವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
2. ಅಧೀಕ್ಷಕ ಇಂಜಿನಿಯರರು(ವಿ), ಐಟಿ & ಎಂಟಿ, ಹೆಸ್ಕಾಂ, ಹುಬ್ಬಳ್ಳಿ, ಇವರಿಗೆ ಹೆಸ್ಕಾಂ, ವೆಬ್ ಸೈಟ್ **hescom.karnataka.gov.in** ನಲ್ಲಿ ಪ್ರಕಟಿಸಲು
3. ಕಾರ್ಯನಿರ್ವಾಹಕ ಇಂಜಿನಿಯರರು (ವಿ), ಕಾರ್ಯ ಮತ್ತು ಪಾಲನಾ ವಿಭಾಗ, ಹೆಸ್ಕಾಂ, ಹುಬ್ಬಳ್ಳಿ ನಗರ/ ಹುಬ್ಬಳ್ಳಿ ಗ್ರಾಮೀಣ/ಧಾರವಾಡ ನಗರ/ಧಾರವಾಡ ಗ್ರಾಮೀಣ /ಗದಗ /ರೋಣ/ಹಾವೇರಿ/ರಾಣೇಬೆನ್ನೂರ /ಶಿರಸಿ/ ದಾಂಡೇಲಿ/ಹೊನ್ನಾವರ/ಕಾರವಾರ/ಬೆಳಗಾವಿ ನಗರ/ ಬೆಳಗಾವಿ ಗ್ರಾಮೀಣ/ ಘಟಪ್ರಭಾ/ ಬೈಲಹೊಂಗಲ/ ರಾಮದುರ್ಗ/ಚಿಕ್ಕೋಡಿ/ ಅಥಣಿ/ರಾಯಬಾಗ/ವಿಜಯಪುರ/ಇಂಡಿ/ಬಸವನ ಬಾಗೇವಾಡಿ/ ಬಾಗಲಕೋಟ/ ಜಮಖಂಡಿ/ಮುಧೋಳ ಇವರ ಮಾಹಿತಿಗಾಗಿ.

ಮಹಾ ಕಡತ/ಕಛೇರಿ ಪ್ರತಿ

## ನಕಲು ಪ್ರತಿ ಪಡೆಯಲು / ಮರು ಮೌಲ್ಯಮಾಪನಕ್ಕಾಗಿ ಸಲ್ಲಿಸಲಬೇಕಾದ ಅರ್ಜಿ ನಮೂನೆ

ಇಂದ :

(ಹೆಸರು ಮತ್ತು ಕಾರ್ಯನಿರ್ವಹಿಸುತ್ತಿರುವ ಕಚೇರಿಯ ಪೂರ್ಣ ವಿಳಾಸ,

ದೂರವಾಣಿ ಸಂಖ್ಯೆ ಮತ್ತು ಇ-ಮೇಲ್ ವಿಳಾಸ)

____________________________

____________________________

____________________________

ಗೆ,

ಪ್ರಧಾನ ವ್ಯವಸ್ಥಾಪಕರು,

(ಆ. ಮತ್ತು ಮಾ.ಸಂ.ಅ),

ನಿಗಮ ಕಚೇರಿ, ಹೆಸ್ಕಾಂ, ನವನಗರ, ಹುಬ್ಬಳ್ಳಿ

**ವಿಷಯ:** ಉತ್ತರ ಪತ್ರಿಕೆಗಳ ನಕಲು ಪ್ರತಿಯನ್ನು ಪಡೆಯಲು/ ಮರು ಮೌಲ್ಯಮಾಪನಕ್ಕಾಗಿ ಕೋರಿರುವ ಬಗ್ಗೆ.

*****

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಈ ಕೆಳಕಂಡ ಅಭ್ಯರ್ಥಿಯಾದ ನಾನು, ಉತ್ತರ ಪತ್ರಿಕೆಗಳ ನಕಲು ಪ್ರತಿಗಳನ್ನು ಪಡೆಯಲು/ ಮರು ಮೌಲ್ಯಮಾಪನಕ್ಕಾಗಿ ಕೋರಿ ಸಲ್ಲಿಸುವ ಅರ್ಜಿ.

| ಕ್ರ.ಸಂ | ವಿವರಗಳು | | |
|---|---|---|---|
| 1. | ಅಭ್ಯರ್ಥಿಯ ಹೆಸರು (ಬಿಡಿ ಅಕ್ಷರಗಳಲ್ಲಿ) | ಕನ್ನಡ ಭಾಷೆಯಲ್ಲಿ:<br>ಆಂಗ್ಲ ಭಾಷೆಯಲ್ಲಿ: | |
| 2. | ಪ್ರಸ್ತುತ ಹೊಂದಿದ ಹುದ್ದೆ: | | |
| 3. | ಪರೀಕ್ಷೆ ನೋಂದಣಿ ಸಂಖ್ಯೆ: | | |
| 4. | ಕೆಲಸ ಮಾಡುತ್ತಿರುವ ಕಚೇರಿ: | ಕಚೇರಿ:<br>ವಿಭಾಗ:<br>ವೃತ್ತಿ: | |
| 5.(i) | ನಕಲು ಪ್ರತಿಯನ್ನು ಪಡೆಯಬೇಕಾಗಿರುವ ಉತ್ತರ ಪತ್ರಿಕೆಗಳ ವಿವರ:<br>(ಅನುಗಮನ/ಉದ್ಯೋಗ ಪೂರ್ವ ತರಬೇತಿಯ ಅಂತಿಮ ಪರೀಕ್ಷೆ) | ಪರೀಕ್ಷೆ/ವಿಷಯ | ಪತ್ರಿಕೆ ಸಂಖ್ಯೆ ಗುರುತಿಸಿ |
| | | | |
| | | | |
| 5.(ii) | **ಸಂದಾಯ ಮಾಡಿರುವ ಶುಲ್ಕ ವಿವರ:**<br>(ಮೂಲ ರಶೀದಿಯನ್ನು ಲಗತ್ತಿಸತಕ್ಕದು)<br>**(ನಕಲು ಪ್ರತಿ ಪಡೆಯಲು)** | ಮೊಬಲಗು: ರಶೀದಿ ಸಂಖ್ಯೆ:<br>ದಿನಾಂಕ:<br>ಸ್ಥಳ: | |

| ಕ್ರ.ಸಂ | ವಿವರಗಳು | | |
|---|---|---|---|
| 6.(i) | ಮರು ಮೌಲ್ಯಮಾಪನಕ್ಕೆ ಸಲ್ಲಿಸಿರುವ ಉತ್ತರ ಪತ್ರಿಕೆಗಳ ವಿವರ:<br>(ಅನುಗಮನ/ಉದ್ಯೋಗ ಪೂರ್ವ ತರಬೇತಿಯ ಅಂತಿಮ ಪರೀಕ್ಷೆ) | ಪರೀಕ್ಷೆ/ವಿಷಯ | ಪತ್ರಿಕೆ ಸಂಖ್ಯೆ ಗುರುತಿಸಿ |
| | | | |
| | | | |
| 6.(ii) | ಸಂದಾಯ ಮಾಡಿರುವ ಶುಲ್ಕ ವಿವರ:<br>(ಮೂಲ ರಶೀದಿಯನ್ನು ಲಗತ್ತಿಸತಕ್ಕದು)<br>(ಮರು ಮೌಲ್ಯಮಾಪನ ಮಾಡಲು) | ಮೊಬಲಗು: ರಶೀದಿ ಸಂಖ್ಯೆ:<br>ದಿನಾಂಕ:<br>ಸ್ಥಳ: | |

ಮೇಲಿನ ಅಭ್ಯರ್ಥಿಯಾದ ನಾನು ಈ ಮೂಲಕ ದೃಢೀಕರಿಸುವುದೇನೆಂದರೆ, ಈ ಅರ್ಜಿಯಲ್ಲಿ ನಮೂದಿಸಿರುವ ಎಲ್ಲಾ ವಿವರಗಳು ಸತ್ಯವಾಗಿವೆ. ತಪ್ಪು ಅಥವಾ ಅಪೂರ್ಣ ಎಂದು ಕಂಡು ಬಂದಲ್ಲಿ ಯಾವುದೇ ಮುನ್ಸೂಚನೆ ನೀಡದೇ ಅರ್ಜಿಯನ್ನು ತಿರಸ್ಕರಿಸಬಹುದಾಗಿರುತ್ತದೆ.

ಅಭ್ಯರ್ಥಿಯ ಸಹಿ

ಕಚೇರಿ ದೃಢೀಕರಣ

1. ನಕಲು ಪ್ರತಿ ಪಡೆಯಲು ಸಂದಾಯ ಮಾಡಿರುವ ಪರೀಕ್ಷೆಯ ಶುಲ್ಕ

| ನಕಲು ಪ್ರತಿ ಪಡೆಯಲು ಬೇಕಿರುವ ಒಟ್ಟು ಪತ್ರಿಕೆಗಳ ಸಂಖ್ಯೆ | ಪಾವತಿಸುವ ಒಟ್ಟು ಮೊತ್ತ | ರಶೀದಿ ಸಂಖ್ಯೆ | ರಶೀದಿ ದಿನಾಂಕ |
|---|---|---|---|
| | | | |

2. ಮರು ಮೌಲ್ಯಮಾಪನಕ್ಕೆ ಮಾಡಲು ಸಂದಾಯ ಮಾಡಿರುವ ಪರೀಕ್ಷೆಯ ಶುಲ್ಕ

| ಮರು ಮೌಲ್ಯಮಾಪನಕ್ಕೆ ಸಲ್ಲಿಸಿರುವ ಒಟ್ಟು ಪತ್ರಿಕೆಗಳ ಸಂಖ್ಯೆ | ಪಾವತಿಸುವ ಒಟ್ಟು ಮೊತ್ತ | ರಶೀದಿ ಸಂಖ್ಯೆ | ರಶೀದಿ ದಿನಾಂಕ |
|---|---|---|---|
| | | | |

3. ಅರ್ಜಿ ಕ್ರಮ ಸಂಖ್ಯೆ (1) ರಿಂದ (6) ವರೆಗೆ ಅಭ್ಯರ್ಥಿಯು ನಮೂದಿಸಿರುವ ವಿವರಗಳನ್ನು ಪರಿಶೀಲಿಸಿ, ಸರಿಯಾಗಿದೆ ಎಂದು ಈ ಮೂಲಕ ದೃಢೀಕರಿಸಲಾಗಿದೆ.

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರರು(ವಿ)
ಕೈ.ತ.ಕೇಂದ್ರ, ಹೆಸ್ಕಾಂ, ಹುಬ್ಬಳ್ಳಿ

ಕಾರ್ಯನಿರ್ವಾಹಕ ಇಂಜಿನಿಯರರು(ವಿ)
ಮಾ.ಸಂ.ಅ. & ಕೈ.ತ. ಕೇಂದ್ರ, ಹೆಸ್ಕಾಂ,ಹುಬ್ಬಳ್ಳಿ